1) ಮೆಟ್ರಿಕ್‌ಪೂರ್ವ ವಿದ್ಯಾರ್ಥಿ ನಿಲಯಗಳು. - 805
2) ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು - 106
ಒಟ್ಟು - 911

ಆ. 480 ವಿದ್ಯಾರ್ಥಿನಿಲಯಗಳು ಮಾತ್ರ ಸ್ವಂತ ಕಟ್ಟಡಗಳನ್ನು ಹೊಂದಿರುತ್ತದೆ.

ಇ. ಸ್ವಂತ ಕಟ್ಟಡ ಇಲ್ಲದೇ ಇರುವ ವಿದ್ಯಾರ್ಥಿನಿಲಯಗಳಿಗೆ ಕಟ್ಟಡಗಳನ್ನು ಹಂತಹಂತವಾಗಿ ಕಟ್ಟಲು ಕ್ರಮ ಕೈಗೊಳ್ಳಲಾಗುತ್ತಿದೆ. 110 ಕಟ್ಟಡಗಳು ನಿರ್ಮಾಣವಾಗುತ್ತಿವೆ. 1994-95ನೇ ಸಾಲಿನಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ ಈ ಬಾಬ್ತಿಗಾಗಿ 440 ಲಕ್ಷ ರೂ.ಗಳನ್ನು ಒದಗಿಸಲಾಗಿತ್ತು. ಇದಲ್ಲದೆ, ವಿಶೇಷ ಘಟಕ ಯೋಜನೆಯಡಿಯಲ್ಲಿ ಕ್ರೂಢೀಕರಿಸಿದ ಹಣದಿಂದ 522 ಲಕ್ಷ ರೂ. ಗಳನ್ನು ಈ ಬಾಬ್ತಿಗಾಗಿ ಒದಗಿಸಲಾಗಿದೆ. ಕೇಂದ್ರ ಸರ್ಕಾರದಿಂದ ಒಟ್ಟು 720 ಲಕ್ಷ ರೂ.ಗಳ ನೆರವನ್ನು ಕೋರಿದ್ದು, ಅವರಿಂದ 238.64 ಲಕ್ಷ ರೂ.ಗಳು ಬಂದಿರುತ್ತದೆ. ಇದರಲ್ಲಿ 48 ಕಟ್ಟಡಗಳ ಕಾಮಗಾರಿ ಕೈಗೆತ್ತಿ ಕೊಳ್ಳಲು ಮೊದಲನೆಯ ಕಂತಾಗಿ 220 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಜಿಲ್ಲಾ ಪಂಚಾಯತ್ ವತಿಯಿಂದಲೂ ಕಟ್ಟಡಗಳನ್ನು ನಿರ್ಮಿಸಲು 1994-95ನೇ ಸಾಲಿನಲ್ಲಿ ಒಟ್ಟು 132.23 ಲಕ್ಷ ರೂ. ಗಳನ್ನು ಒದಗಿಸಿಕೊಂಡಿದ್ದು, ಕ್ರಮ ಕೈಗೊಳ್ಳಲಾಗಿದೆ. ಇದಲ್ಲದೆ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ವತಿಯಿಂದಲೂ ವಿದ್ಯಾರ್ಥಿನಿಲಯದ ಕಟ್ಟಡಗಳನ್ನು ಕಟ್ಟಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ವಿಷಯ : ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೈಮಗ್ಗ ಅಭಿವೃದ್ಧಿ ಕೇಂದ್ರಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 745 (1054)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಸಕ್ಕರೆ ಜವಳಿ ವಿಜ್ಞಾನ ಮತ್ತು ತಂತ್ರಜ್ಞಾನ ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಒಟ್ಟು ತೀವ್ರ ಕೈಮಗ್ಗ ಅಭಿವೃದ್ಧಿ ಕೇಂದ್ರಗಳ ಸಂಖ್ಯೆ ಎಷ್ಟು ? ಹಾಗೂ ಈ ಕೇಂದ್ರಗಳಲ್ಲಿ ಎಷ್ಟು ಮಂದಿ ಕೆಲಸ ನಿರ್ವಹಿಸುತ್ತಿದ್ದಾರೆ. (ಜಿಲ್ಲಾವಾರು ಸಂಖ್ಯೆಯನ್ನು ನೀಡುವುದು)

ಆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಈ ಕೇಂದ್ರಗಳಿಗೆ ನಿರಂತರವಾಗಿ ನೂಲನ್ನು ಸರಬರಾಜು ಮಾಡುತ್ತಿದೆಯೆ.

ಇ. ಇಲ್ಲದಿದ್ದಲ್ಲಿ, ಇದಕ್ಕೆ ಕಾರಣಗಳೇನು ಹಾಗೂ ಇದನ್ನು ಸರಿಪಡಿಸಲು ಸರ್ಕಾರವು ಉದ್ದೇಶಿಸಿರುವ ಕ್ರಮಗಳೇನು ?

ಶ್ರೀ ಪಿ.ಸಿ. ಸಿದ್ದನಗೌಡರ್ : (ಸಕ್ಕರೆ, ಜವಳಿ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು)

ಅ. ರಾಜ್ಯದಲ್ಲಿರುವ ತೀವ್ರ ಕೈಮಗ್ಗ ಅಭಿವೃದ್ಧಿ ಕೇಂದ್ರಗಳ ಸಂಖ್ಯೆ ಹಾಗೂ ಈ ಕೇಂದ್ರಗಳಲ್ಲಿ ಕಾರ್ಯ ಮಾಡುತ್ತಿರುವ ನೇಕಾರರ ಸಂಖ್ಯೆಯ ವಿವರಗಳು ಈ ಕೆಳಕಂಡಂತಿವೆ :

ಜಿಲ್ಲೆ	ತೀವ್ರ ಕೈಮಗ್ಗ ಅಭಿವೃದ್ಧಿ ಕೇಂದ್ರ ಗಳ ಸಂಖ್ಯೆ	ತೀವ್ರ ಕೈಮಗ್ಗ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ನೇಕಾರರ ಸಂಖ್ಯೆ
ಬಿಜಾಪುರ	43	8797
ಬೆಳಗಾಂ	14	2073
ಧಾರವಾಢ	12	4348
ಗುಲ್ಬರ್ಗಾ	21	2740
ಬೀದರ್	05	871
ರಾಯಚೂರು	08	1527
ಚಿತ್ರದುರ್ಗ	05	364
ಶಿವಮೊಗ್ಗ	05	496
ಬಳ್ಳಾರಿ	05	563
ಹಾಸನ	01	100
ಮಂಡ್ಯ	02	76
ಮೈಸೂರು	01	10
ಚಿಕ್ಕಮಗಳೂರು	01	24
ಬೆಂಗಳೂರು (ಗ್ರಾ)	01	09
ಉತ್ತರ ಕನ್ನಡ	01	77
ದಕ್ಷಿಣ ಕನ್ನಡ	03	173
ಕೋಲಾರ	03	71
ಒಟ್ಟು :	131	22,319

ಆ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಈ ಕೇಂದ್ರಗಳಿಗೆ ನಿರಂತರವಾಗಿ ನೂಲನ್ನು ಸರಬರಾಜು ಮಾಡುತ್ತಿದೆ. ಆದರೆ ಕೆಲವೊಂದು ಸಂದರ್ಭಗಳಲ್ಲಿ ನೂಲಿನ ಅಭ್ಯಾಸದಿಂದ ಹಾಗೂ ಆರ್ಥಿಕ ಬಿಕ್ಕಟ್ಟಿನಿಂದಾಗಿ, ನೇಕಾರರಿಗೆ ನಿರಂತರವಾಗಿ, ನೂಲು ಸರಬರಾಜು ಮಾಡಲು ತೊಂದರೆಯಾಯಿತು.

ಇ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ರಾಜ್ಯದಲ್ಲಿರುವ ಹಾಗೂ ಹೊರ ರಾಜ್ಯಗಳಲ್ಲಿರುವ ಸರ್ಕಾರಿ ನೂಲಿನ ಗಿರಣಿಗಳಿಂದ, ಇತರೆ ರಾಜ್ಯ ಸರ್ಕಾರಗಳ ಮತ್ತು

ಕೇಂದ್ರ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿರುವ ನೂಲಿನ ಗಿರಣಿಗಳಿಂದ ನೂಲನ್ನು ಖರೀದಿಸುತ್ತಿದೆ. ಪ್ರಸಕ್ತ ದಿನಗಳಲ್ಲಿ ಹತ್ತಿಯ ಬೆಲೆಗಳು ಏರಿರುವುದರಿಂದ ಮುಖ್ಯವಾಗಿ 20ನೇ ನಂಬರಿನ ನೂಲು ಹಾಗೂ ಇತರೆ ನಮೂನೆಯ ನೂಲಿನ ಬೆಲೆಗಳು ಗಣನೀಯವಾಗಿ ಏರಿವೆ. ಈ ಕಾರಣದಿಂದ, ಸಹಕಾರಿ ನೂಲಿನ ಗಿರಣಿಗಳು, 20ನೇ ನಂಬರಿನ ನೂಲಿನ ಉತ್ಪಾದನೆಯನ್ನು ಸಲ್ಲಿಸಿದೆ ಆದ್ದರಿಂದ ನಿಗಮವು ಸಹ ತನ್ನ. ಉತ್ಪಾದನಾ ಯೋಜನೆಯನ್ನು 20ನೇ ನಂಬರಿನ ನೂಲಿನಿಂದ 10ನೇ ನಂಬರಿನ ನೂಲಿಗೆ ಬದಲಾಯಿಸಬೇಕಾಯಿತು.

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು 40ನೇ ನಂಬರಿನ ನೂಲಿನ್ನು ರಾಜ್ಯದ ಹಾಗೂ ಹೊರ ರಾಜ್ಯಗಳ ವಿವಿಧ ಗಿರಣಿಗಳಿಂದ ಖರೀದಿಸಿ ನೇಕಾರರಿಗೆ ಸರಬರಾಜು ಮಾಡಲು ಕ್ರಮ ತೆಗೆದುಕೊಂಡಿದೆ.

ವಿಷಯ : ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಲಿ ಯೋಜನೆ.

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ 746 (1046)

ಶ್ರೀ ಮಲ್ಲಿಕಾರ್ಜುನ ಖರ್ಗೆ ಎಂ. (ಗುರುಮಿಠಕಲ್) : ಜಿಲ್ಲೆ ಮಾನ್ಯ ನಗರಾಭಿವೃದ್ಧಿ ಕಾಡಾ ಮತ್ತು ಹೇದರಾಬಾದ್ ಕರ್ನಾಟಕ ಪ್ರದೇಶಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. 1995-96ನೇ ಸಾಲಿನ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಕ್ರಿಯಾ ಯೋಜನೆಯನ್ನು ಸರ್ಕಾರವು ಒಪ್ಪಿದೆಯೇ ? ಮತ್ತು 1995-96ರಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಕಾಮಗಾರಿಗಳಿಗೆ ಸೂಚಿಸಿದ ಮೊತ್ತವೆಷ್ಟು ?

ಆ. ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು 1994-95ನೇ ಸಾಲಿನಲ್ಲಿ ಅಭಿವೃದ್ಧಿ ಕಾರ್ಯಕ್ರಮಕ್ಕೆ ಖರ್ಚು ಮಾಡಿದ ಹಣವೆಷ್ಟು ?

ಇ. 1995-96ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಮಿಸಲಾದ ಹಣವನ್ನು ಬಿಟ್ಟು ಬೇರೆ ಹಣವನ್ನು ಪುನರ್ ಹಂಚಿಕೆ ಮಾಡುವ ಪ್ರಸ್ತಾವನೆಯು ಸರ್ಕಾರದಲ್ಲಿ ದೆಯೇ ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಕಾಡಾ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಸಚಿವರು):

ಅ. 1995-96 ರ ಕ್ರಿಯಾ ಯೋಜನೆಗೆ ಇನ್ನೂ ಸರ್ಕಾರವು ಅನುಮೋದನೆ ನೀಡಿಲ್ಲ. 1995-96ನೇ ಸಾಲಿಗೆ ಮಂಡಳಿಗೆ 60 ಕೋಟಿ ರೂ.ಗಳನ್ನು ಅಯವ್ಯಯದಲ್ಲಿ ಸೂಚಿಸಿದೆ.

ಆ. 38 ಕೋಟಿ ರೂ.ಗಳು (1995ರ ಫೆಬ್ರವರಿ ಅಂತ್ಯದವರೆಗೆ)

ಇ. ಇಲ್ಲ.